ಒಮ್ಮೆ ಮನೆಗೆ ಬೇಕಾದ ಕೆಲವೊಂದಿಷ್ಟು ವಸ್ತುಗಳನ್ನು ತರಲೆಂದು ಕಿರಾಣಿ ಅಂಗಡಿಗೆ ಹೋದೆ. ಅದು ಆ ಊರಿನ ಶ್ರೀಮಂತರಾದ ಗೌಡರದೆಂದು ತಿಳಿದಿದ್ದೆ. ನಾನು ಸಾಮಾನುಗಳನ್ನು ತಗೊಂಡಾದ ಮೇಲೆ 'ಮಾಸ್ತರ್‌ದೇನು ಹೇಳಪಾ' ಕಿರಾಣಿ ಅಂಗಡಿ ಗೌಡರು ಕೇಳಿದರು; ಕೆಲಸದ ಹುಡುಗ 'ಬರಕೋಪಾ ಗವುಡಾ...' ಅಂದದ್ದು ಕೇಳಿ ಮತ್ತೇ ನನಗೆ ದಿಗಿಲು! ನಮ್ಮ ಭಾಗದಲ್ಲಿ ಅಂಗಡಿಗಳಲ್ಲಿ ದುಡಿಯುವ ಕೆಲಸದ ಹುಡುಗರು ಮಾಲೀಕನನ್ನು 'ಮಾಲಾಕ್ರ', 'ಸಾಹುಕಾರ್ರ' ಎಂದು, ಗೌಡರಾಗಿದ್ದರೆ 'ಗೌಡ್ರ' ಎಂದು ಕರೆಯುವುದುಂಟು. ಆದರಿಲ್ಲಿ ಈ ಗೌಡರನ್ನು ಕೆಲಸದ ಹುಡುಗ 'ಅಲ್ಲಪಾ ಗವುಡ...' ಎಂದು ಎಷ್ಟೊಂದು ಸಲೀಸಾಗಿ ಅಂದುಬಿಡುತ್ತಾನೆ! ವಾವ್ ಎಂಥಾ ವಾಕ್ ಸ್ವಾತಂತ್ರ್ಯವಿದೆ ಇಲ್ಲಿ ಅಂದುಕೊಂಡೆ.

ವಚನವೆಂದರೆ 'ಮಾತು' ಎಂದು ನಮಗೆಲ್ಲ ತಿಳಿದಿದೆ. ನಮ್ಮ ಮಾತು ಹೇಗಿರಬೇಕು ಎಂಬುದರ ಬಗ್ಗೆ ನಮ್ಮ ಪೂರ್ವಸೂರಿಗಳ ಮಾತುಗಳನ್ನು ಗಮನಿಸಿದರೆ ಇದರ ಬಗ್ಗೆ ಚರ್ಚೆಯಾದ

